# ಮದುವೆ ಆಚರಣೆ ಮೆಚ್ಚುವ ದಂಪತಿ



ಮೆಕ್ಸಿಕೋದಿಂದ ಬಂದ ಕಯೂರ್–ಮರಿಯಾನಾ ದಂಪತಿ

ವಿದೇಶದಿಂದ ಬಂದವರಿಗೆ ಇಲ್ಲಿನ ವಿಭಿನ್ನ ಸಂಸ್ಕೃತಿ, ಸಂಪ್ರದಾಯ, ಆಚರಣೆ, ಆಹಾರ ಕ್ರಮದ ಬಗ್ಗೆ ಸಹಜವಾಗಿಯೇ ಬಹಳ ಕುತೂಹಲವಿರುತ್ತದೆ. ಇಲ್ಲಿನ ಸಂಪ್ರದಾಯವನ್ನು ಕೌತುಕದಿಂದ ನೋಡುವುದಲ್ಲದೆ ಪ್ರತಿಯೊಂದು ಆಚರಣೆ, ಹಬ್ಬ, ಕಾರ್ಯಕ್ರಮಗಳನ್ನು ಎಂಜಾಯ್ ಮಾಡ್ತಾರೆ. ಏಕೆಂದರೆ ನಮ್ಮ ಸಂಸ್ಕೃತಿಗೂ ವಿದೇಶಿಯರದಕ್ಕೂ ಬಹಳ ವ್ಯತ್ಯಾಸವಿರುವುದು ಇದಕ್ಕೆ ಕಾರಣ.

ಕೆಲವು ವಿದೇಶೀಯರು ಇಲ್ಲಿನ ಹಬ್ಬ ಹರಿದಿನಗಳ ಆಚರಣೆಯನ್ನು ನೋಡಿ ಸಂತೋಷಪಟ್ಟರೆ ಇನ್ನು ಕೆಲವರಿಗೆ ಇಲ್ಲಿನ ಮದುವೆ ಸಂಪ್ರದಾಯ ಬಹಳ ರೋಚಕ ಅನುಭವ ನೀಡುತ್ತದೆ. ಮದುವೆಯ ಪ್ರತಿ ಹಂತವನ್ನೂ, ಕ್ರಮಗಳನ್ನೂ ಬೆರಗಿನಿಂದಲೇ ನೋಡುತ್ತಾರೆ ಈ ಮಂದಿ. ಮೆಕ್ಸಿಕೋದಿಂದ ಸುಮಾರು ಆರು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದ ಕಯೂರ್–ಮರಿಯಾನಾ ದಂಪತಿಗೂ ಇಲ್ಲಿನ ಮದುವೆ ಸಂಪ್ರದಾಯ ಬಹಳ ಹಿಡಿಸಿದೆಯಂತೆ. ಜತೆಗೆ ಅಚ್ಚರಿ, ಕುತೂಹಲವನ್ನೂ ಉಂಟು ಮಾಡಿದೆಯಂತೆ.

ಬೆಂಗಳೂರಿಗೆ ವೃತ್ತಿ ನಿಮಿತ್ತ ಬಂದ ಕಯೂರ್ ಪಟೇಲ್ ಮೂಲತಃ ಗುಜರಾತಿನವರು. ಆದರೆ ಜೀವಿತದ ಬಹುಪಾಲು ಲಂಡನ್‌ನಲ್ಲಿ ಬೆಳೆದವರು. ಇವರ ಪತ್ನಿ ಮರಿಯಾನಾ ಎಸ್ಟಿವೇಜ್ ಮೆಕ್ಸಿಕೋ ಮೂಲದವರು. ಇಬ್ಬರೂ ಅನೇಕ ವರ್ಷ ಲಂಡನ್‌ನಲ್ಲಿ ಒಂದೇ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲೇ ಪರಿಚಯವಾಗಿ, ಸ್ನೇಹವಾಗಿ ಮದುವೆಯಲ್ಲಿ ಅಂತ್ಯಗೊಂಡು ಇದೀಗ ಬೆಂಗಳೂರಿನಲ್ಲಿ ಬಂದು ನೆಲೆಸಿದ್ದಾರೆ. ಮರಿಯಾನಾ–ಕಯೂರ್ 2011ರಲ್ಲಿ ಮದುವೆಯಾಗಿದ್ದು, ಇದಕ್ಕೂ ಮುನ್ನ ಮರಿಯಾನಾ ಅನೇಕ ಸಲ ಕೆಲಸದ ನಿಮಿತ್ತ ಬೆಂಗಳೂರಿಗೆ ಬಂದು ಹೋಗಿದ್ದರು.

ಪತಿ ಜತೆಗೆ ಬೆಂಗಳೂರಿಗೆ ಬಂದ ಹೊಸದರಲ್ಲಿ ಕೆಫೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಮರಿಯಾನಾ, ಆಮೇಲೆ ಅದನ್ನು ಬಿಟ್ಟು ಸದ್ಯ ಆನ್‌ಲೈನ್‌ನಲ್ಲಿ ಬ್ಯುಸಿನೆಸ್ ಮಾಡುವ ತರಬೇತಿ ಪಡೆಯುತ್ತಿದ್ದಾರೆ. ಕಯೂರ್ ಖಾಸಗಿ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಬೆಂಗಳೂರು ಬಹು ಸಂಸ್ಕೃತಿಯ ನಗರ. ಇಲ್ಲಿ ಜನರು ಆಡುವ ಭಾಷೆ ಸ್ಥಳೀಯವಾಗಿ ಕನ್ನಡವೇ ಆದರೂ ಬಹುತೇಕ ಮಂದಿ ಇಂಗ್ಲಿಷ್‌ನಲ್ಲೇ ವ್ಯವಹಾರ ನಡೆಸುವುದರಿಂದ ಸಾಮಾನ್ಯವಾಗಿ ವಿದೇಶೀಯರಿಗೆ ಎದುರಾಗುವ ಭಾಷೆಯ ಸಮಸ್ಯೆ ಇವರಿಗೆ ಆಗಿಲ್ಲ. ಇವರು ಸಂಪರ್ಕಿಸುವ ಎಲ್ಲರೂ ಚೆನ್ನಾಗಿ ಇಂಗ್ಲಿಷ್ ಮಾತನಾಡಬಲ್ಲವರಾದ್ದರಿಂದ ಇವರಿಗೆ ಯಾವ ತೊಂದರೆಯೂ ಉಂಟಾಗಿಲ್ಲವಂತೆ.

ಶಾಪಿಂಗ್ ಮಾಡುವುದು ಮರಿಯಾನಾಗೆ ಇಷ್ಟವಂತೆ. 'ಬೆಂಗಳೂರಿನ ಕಮರ್ಷಿಯಲ್ ಸ್ಟ್ರೀಟ್ ಶಾಪಿಂಗ್ ಪ್ರಿಯರ ಸ್ವರ್ಗ ಎನ್ನುವ ಮರಿಯಾನಾ, ಬಿಂದಿ, ಬಳೆ, ಬ್ಯಾಗ್, ಬಟ್ಟೆಗಳನ್ನು ಇಲ್ಲೇ ಖರೀದಿಸುತ್ತೇನೆ. ಇಲ್ಲಿ ದೊರೆಯುವ ವಸ್ತುಗಳು ಕ್ರೇಜಿ ಎನಿಸುವಷ್ಟು ಚೆನ್ನಾಗಿರುತ್ತವೆ. ಶಾಪಿಂಗ್ ಮಾಡೋದನ್ನು ಬಹಳ ಎಂಜಾಯ್ ಮಾಡ್ತೇನೆ' ಎನ್ನುತ್ತಾರೆ.

ಕಯೂರ್ ಬೆಂಗಳೂರು, ಕರ್ನಾಟಕವನ್ನು ಬಹುವಾಗಿ ಮೆಚ್ಚಿದ್ದಾರೆ. 'ಇಲ್ಲಿನ ವಾತಾವರಣ ಚೆನ್ನಾಗಿದೆ, ಇಲ್ಲಿನ ಊಟ ತಿಂಡಿ ರುಚಿಕಟ್ಟಾಗಿದೆ. ನಮಗೆ ಮಸಾಲೆಯುಕ್ತ ಅಡುಗೆ ಎಂದರೆ ಇಷ್ಟ. ಚಿಕನ್ ಟಿಕ್ಕ, ಪಾಲಕ್ ಪನೀರ್, ದಾಲ್ ಅನ್ನ ಇಷ್ಟಪಟ್ಟು ತಿನ್ನುತ್ತೇವೆ. ಮನೆಯಲ್ಲಿ ಡೋಕ್ಲಾ ಮಾಡಿ ಸವಿಯುತ್ತೇವೆ. ವಾರಾಂತ್ಯವನ್ನು ಸ್ಟಾರ್ ಹೋಟೆಲ್‌ಗಳಲ್ಲಿ ಕಳೆಯುತ್ತೇವೆ. ಬೆಂಗಳೂರಿನಲ್ಲಿರುವ ಇಡೊ ರೆಸ್ಟೋರೆಂಟ್, ಐಟಿಸಿ ಗಾರ್ಡೇನಿಯ, ಒಬೆರಾಯ್ ಹೋಟೆಲ್‌ಗಳಲ್ಲಿ ಸಮಯ ಕಳೆಯುವುದೆಂದರೆ ಇಡೀ ಕುಟುಂಬದ ಸದಸ್ಯರಿಗೆ ಇಷ್ಟ. ಕೆಲವೊಮ್ಮೆ ಮಾಲ್‌ಗಳಿಗೂ ಭೇಟಿ ನೀಡಿ ಶಾಪಿಂಗ್ ಮಾಡುತ್ತೇವೆ' ಎನ್ನುತ್ತಾರೆ ಕಯೂರ್.

'ಇಲ್ಲಿನ ಮದುವೆ ಸಂಪ್ರದಾಯದ ಬಗ್ಗೆ ಬೆಳಕು ಚೆಲ್ಲುವ ಅವರು, 'ಇಲ್ಲಿನ ಮದುವೆ ಸಂಪ್ರದಾಯ ಅಚ್ಚರಿ ಮೂಡಿಸುವಷ್ಟು ವಿಶಿಷ್ಟವಾಗಿದೆ. ಮದುವೆ ಹಿಂದಿನ ದಿನದ ಮೆಹೆಂದಿ ಹಚ್ಚುವ ಕಾರ್ಯಕ್ರಮವೂ ಬಹಳ ಆಕರ್ಷಕ. ಮೆಹೆಂದಿಯ ವರ್ಣರಂಜಿತ ಚಿತ್ತಾರ ಪುಳಕ ತರುತ್ತದೆ. ಮದುವೆಯ ಪ್ರತಿಹಂತವೂ ಕುತೂಹಲಕಾರಿ. ಮದುವೆ ಸಮಾರಂಭಗಳಂತಹ ವಿಶೇಷ ಸಂದರ್ಭದಲ್ಲಿ ತಯಾರಿಸುವ ಊಟ ತಿಂಡಿಗಳೂ ಬಹಳ ಚೆನ್ನಾಗಿರುತ್ತವೆ. ಸಾಂಪ್ರದಾಯಿಕ ಉಡುಗೆ, ನಡವಳಿಕೆಗಳು, ಆಚರಣೆ.. ಒಟ್ಟಿನಲ್ಲಿ ಭಾರತೀಯ ಸಂಪ್ರದಾಯದ ಮದುವೆ ನಮಗೆ ವಿಭಿನ್ನ ಅನುಭವ ನೀಡುತ್ತದೆ' ಎನ್ನುತ್ತಾರೆ ಮರಿಯಾನಾ.

ವಿದೇಶೀಯರಿಗೆ ಭಾರತೀಯ ಸಿನಿಮಾ ಎಂದರೆ ಅದೇನೋ ಸೆಳೆತ. ಅಂತೆಯೇ ಕಯೂರ್–ಮರಿಯಾನಾ ದಂಪತಿಗೂ ಭಾರತೀಯ ಸಿನಿಮಾ ಅದ್ಭುತ ಅನುಭವ ನೀಡುತ್ತದೆಯಂತೆ. 'ಇಂಗ್ಲಿಷ್–ವಿಂಗ್ಲಿಷ್', ನಮಸ್ತೆ ಲಂಡನ್' ಸಿನಿಮಾ ಕಥೆ ಬಹಳ ಚೆನ್ನಾಗಿದೆ. ಬಾಲಿವುಡ್ ಸಿನಿಮಾಗಳನ್ನೂ ಸಖತ್ ಎಂಜಾಯ್ ಮಾಡ್ತೀವಿ. ಹಿಂದಿ ಸಿನಿಮಾ ಹಾಡುಗಳು ಕೇಳಲು ಬಹಳ ಇಂಪಾಗಿರುತ್ತವೆ. ಇಲ್ಲಿ ಕಳೆಯುವ ಪ್ರತಿಯೊಂದು ದಿನವೂ ಬಹಳ ರೋಚಕ ಅನುಭವ ನೀಡುತ್ತದೆ. ಬೆಂಗಳೂರಿನ ವಾಸ ನಮಗೆ ಬಹಳ ಖುಷಿ ತಂದಿದೆ' ಎನ್ನುತ್ತಾರೆ ಈ ದಂಪತಿ.

■ ಅವನೀಶ್